ಅಂಗಳದಲ್ಲಿ ಹಬ್ಬದಂತೆ ಜರುಗುತ್ತಿದ್ದ ಈ ಎಲ್ಲ ಚಟುವಟಿಕೆಗಳನ್ನು ಕಣ್ತುಂಬಿಕೊಳ್ಳುತ್ತಿದ್ದ ಶಿಶಿರ ಭಾರವಾದ ನಿಟ್ಟುಸಿರಿನೊಂದಿಗೆ ಮೇಲೆದ್ದ.

ಅವನಿಗೆ ಮಲೆನಾಡು ಹೊಸತಲ್ಲ. ಮಳೆಯೂ ಹೊಸತಲ್ಲ. ಆದರೆ ಮಲೆನಾಡಿಗನಾಗಿಯೂ ಪಟ್ಟಣದವನಂತೆ ಮಳೆಯನ್ನು ಪ್ರೀತಿಯಿಂದ ನೋಡುತ್ತಿರುವ ಈ ಪರಿಯಿದೆಯಲ್ಲಾ, ಅದು ಮಾತ್ರ ಹೊಸತು. ಇಪ್ಪತ್ತೊಂದು ವರ್ಷಗಳಿಂದ ಹೀಗೇ ಧೋ ಎಂದು ಶಬ್ದ ಮಾಡುತ್ತಾ, ಮರ–ಮನೆ–ಅಂಗಳಗಳನ್ನು ತೋಯಿಸುತ್ತಾ ಸುರಿಯುತ್ತಿದ್ದ ಅದೇ ರಗಳೆ ಮಳೆ ಕಳೆದ ಏಳು ವರ್ಷಗಳಲ್ಲಿ ಹಠಾತ್ತನೆ ನವಿರಾದ ವರ್ಷಧಾರೆಯಾಗಿ ಬದಲಾದ ಬಗೆಗೆ ಅವನಲ್ಲೂ ಅಚ್ಚರಿಯಿದೆ. ಇದೇ ಮಳೆ ಅಲ್ಲಿ, ಬೆಂಗಳೂರೆಂಬ ದಡಿಯ ಪಟ್ಟಣದಲ್ಲಿ ಮೋರಿಗಳನ್ನು ಉಕ್ಕಿಸುತ್ತಾ, ರಸ್ತೆಗಳ ಮೇಲೆ ಹರಿಯುತ್ತಾ, ಟ್ರಾಫಿಕ್ ಜ್ಯಾಮಾಗಿಸುತ್ತಾ ಸುರಿಯುವಾಗ ಅವನಿಗೆ ಖೇದವಾಗುತ್ತದೆ. ಕೆಲಸ ಸಿಕ್ಕಿದ ಮೊದಲ ವರುಷ ಹಳ್ಳಿಗೆ ಬಂದು ಹಿಂತಿರುಗಿದವನು ಅದೇ ಗುಂಗಿನಲ್ಲಿ ಬೆಂಗಳೂರಿನ ಮಳೆಗೆ ಮೈಕೊಟ್ಟು ಶೀತ–ಜ್ವರಗಳಿಗೊಳಗಾಗಿ ವಾರಗಟ್ಟಲೆ ಪಾಡುಪಟ್ಟಾಗಿನಿಂದ ಬೆಂಗಳೂರಿನ ಮೇಲೆ, ಅಲ್ಲಿಯ ಮಳೆಯ ಮೇಲೆ ತಾತ್ಸಾರವೊಂದು ಹುಟ್ಟಿಕೊಂಡಿತ್ತು. ಈಗ ಈ ಊರಿನ ಮಳೆ ಬಿಡಿಸುತ್ತಿರುವ ಚಂದದ ಚಿತ್ರಗಳನ್ನು ಕಣ್ತುಂಬಿಕೊಳ್ಳುವಾಗ ಆ ತಾತ್ಸಾರ ಮತ್ತಷ್ಟು ಬೆಳೆಯತೊಡಗಿತ್ತು.

"ಸುರೇಶನ ಅಂಗಡಿಗೆ ಹೋಗ್ತೀನಿ ಅಂದ್ಯಲ್ಲಾ, ಹೋಗೋದಿಲ್ವಾ?"

ಒಳಗಿನಿಂದ ತೇಲಿಬಂದ ಅಮ್ಮನ ಮಾತು ಶಿಶಿರನನ್ನು ಯೋಚನೆಗಳ ಪ್ರಪಂಚದಿಂದ ಹೊರತಂದಿತು. ಹೌದು... ಗೆಳೆಯ ಸೂರಿಯ ಅಂಗಡಿಗೆ ಹೋಗಲಿಕ್ಕಿದೆ. ಸಾಮಾನು ಕೊಳ್ಳಲಿಕ್ಕಲ್ಲ, ಆತ್ಮವಿಶ್ವಾಸವನ್ನು ಖರೀದಿಸಲಿಕ್ಕೆ! ಎರಡು ವರ್ಷದ ಹಿಂದೆ 'ಪಟ್ಟಣವೊಂದೇ ಬದುಕಿನ ದಾರಿ' ಎಂಬ ಅಘೋಷಿತ ನಿಯಮವನ್ನು ಮೀರಿ ಬೆಂಗಳೂರಿನಿಂದ ಊರಿಗೆ ಮರಳಿ ಬಂದವನು ಸೂರಿ. ಐದಾರು ತಿಂಗಳ ಕಾಲ ಸಂಪಾದನೆಯಿಲ್ಲದೆ ಅಲೆದಾಡಿದ್ದನಾದರೂ ಕೊನೆಗೆ ಯಾವುದೋ ಗ್ರಾಮಾಭಿವೃದ್ಧಿ ಯೋಜನೆಯಡಿ ಸಾಲ ಪಡೆದುಕೊಂಡು ಪಕ್ಕದೂರಿನಲ್ಲಿ ಅಂಗಡಿಯೊಂದನ್ನು ತೆರೆದಿದ್ದ. ಮೊದಮೊದಲು ಒಂದು ಸಾವಿರ ಇದ್ರೆ ಕೊಡು, ಎರಡು ಸಾವಿರ ಇದ್ರೆ ಕೊಡು ಎಂದು ಆಗಾಗ ಕರೆಮಾಡುತ್ತಿದ್ದನಾದರೂ ಈ ನಡುವೆ ತನ್ನ ಮೊಬೈಲ್ ಬದಲಾದಾಗಿನಿಂದ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಅವನಾಗಿಯೂ ಸಂಪರ್ಕಿಸುವ ಪ್ರಯತ್ನ ಮಾಡಿರಲಿಲ್ಲ. ಬಹುಶಃ ಕಷ್ಟಗಳು ಕಳೆದವೋ ಏನೋ? ಪ್ರಾರಂಭದಲ್ಲಿ ಹೊಯ್ದಾಡಿದ್ದ ವ್ಯಾಪಾರ ಈಗ ಕೈಹಿಡಿದಿರಬಹುದು. ಸಾಲ, ಪರದಾಟಗಳ ಸದ್ದಿಲ್ಲದೇ ಶಾಂತವಾಗಿ ಬದುಕುತ್ತಿದ್ದಾನೆಂದು ಕಾಣುತ್ತದೆ. ಪಟ್ಟಣದಾಚೆಗೂ ಬದುಕು ಕಂಡುಕೊಂಡ ಅವನ ಯಶೋಗಾಥೆಯನ್ನೊಮ್ಮೆ ಕಣ್ಣಾರೆ ನೋಡಲಿಕ್ಕೆಂದು, ಆ ಮೂಲಕ ತನ್ನ ಮನದಲ್ಲಿ ಅಸ್ಪಷ್ಟವಾಗಿ ಉರಿಯುತ್ತಿರುವ ಆಸೆಗಳಿಗೊಂದಷ್ಟು ಉರುವಲು ಸಂಪಾದಿಸಲೆಂದು ಅವನೀಗ ಹೊರಟುನಿಂತಿದ್ದ.

ಮಳೆಯ ತಾಂಡವವಿನ್ನೂ ಕಡಿಮೆಯಾಗಿರಲಿಲ್ಲ. ಪರ್ಸನ್ನು ಜೇಬಿಗೆ ತುರುಕಿಕೊಂಡು, ಛತ್ರಿ ಬಿಡಿಸುತ್ತಾ ಅಂಗಳದ ನೀರಿಗಡಿಯಿಟ್ಟನು ಶಿಶಿರ್. ಪಚ್ ಪಚ್ಚೆನ್ನುತ್ತಾ ಸೊಂಟದ ತನಕ ಸಿಡಿಯುತ್ತಿದ್ದ ನೀರಿನಲ್ಲಿ ಬೇಕಂತಲೇ ದಪ್ಪ ದಪ್ಪ ಹೆಜ್ಜೆಗಳನ್ನಿಡುತ್ತಾ ಮುನ್ನಡೆದವನಿಗೆ ಉಣಗೋಲಿನಾಚೆ ನಾಲ್ಕು ತಿಂಗಳ ಕೆಳಗೆ ಕಟ್ಟಿ ಬಿಟ್ಟಿದ್ದ ಹೊಸಮನೆಯ ಪಾಯ ಎದುರಾಯಿತು. ಹೊಸಮನೆ! ತನ್ನ ಜೀವಮಾನದ ಸಾಧನೆ! ಏಳು ವರ್ಷಗಳ ಉದ್ಯೋಗ ಜೀವನದುದ್ದಕ್ಕೂ ಲಾಗ ಹಾಕಿ, ಪಲ್ಟಿ ಹೊಡೆದು ಉಳಿಸಿದ್ದ ಹಣದ ಮುಕ್ಕಾಲು ಭಾಗವನ್ನು ಸುರಿದ ಮೇಲೆ ಅಂತೂ ಇಂತೂ ಪಾಯವೊಂದು ಪೂರ್ಣವಾಗಿತ್ತು. ಇನ್ನು ಉಳಿದಿರುವ ಹಣದಿಂದ ಹಿಡಿದು ಜೇಬಿನಲ್ಲಿರುವ ಕಟ್ಟಕಡೆಯ ರೂಪಾಯಿಯ ತನಕ ಎಲ್ಲವನ್ನೂ ಸೇರಿಸಿದರೆ ಗೋಡೆಗಳನ್ನು ಕಟ್ಟಿನಿಲ್ಲಿಸಬಹುದೆಂಬ ಅಮೋಘವಾದ ಲೆಕ್ಕವನ್ನು ರಾಮಯ್ಯ ಮೇಸ್ತ್ರಿ ಕೂಡಿ, ಕಳೆದು, ಗುಣಿಸಿ, ಭಾಗಿಸಿ ಹೇಳಿದ್ದ.